Dis.no: 2667/20
17/6

## ಟೆಂಡರು ಪ್ರಕಟಣೆ

ಉಡುಪಿಯ ಜಿಲ್ಲಾ ನ್ಯಾಯಾಲಯ ಮತ್ತು ಇತರ ವಿಚಾರಣಾ ನ್ಯಾಯಾಲಯಗಳ ಅವಧಿ ಮುಗಿದ ಮೊಕದ್ದಮೆಗಳ ಕಾಗದಗಳನ್ನು ನಿಯಮಾನುಸಾರ ಹರಾಜು ಮಾಡುವ ಬಗ್ಗೆ ಅರ್ಹ ರದ್ದಿ ಕಾಗದಗಳ ವ್ಯಾಪಾರಿಗಳಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಹರಾಜಿನಲ್ಲಿ ಭಾಗವಹಿಸಬಯಸುವ ಟೆಂಡರುದಾರರು ಪ್ರತೀ ಕಿಲೋ ಗ್ರಾಂ ರದ್ದಿ ಕಾಗದಕ್ಕೆ ತಾವು ಕೊಡಬಹುದಾದ ದರವನ್ನು ತಮ್ಮ ಟೆಂಡರಿನಲ್ಲಿ ನಮೂದಿಸತಕ್ಕದ್ದು ಮತ್ತು ಹೀಗೆ ನಮೂದಿಸಿದ ಟೆಂಡರುಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಈ ನ್ಯಾಯಾಲಯದ ಕಛೇರಿಯನ್ನು **ದಿನಾಂಕಃ 30-06-2020 ರ ಸಾಯಂಕಾಲ ಗಂಟೆ 5.00** ಗಂಟೆಯೊಳಗೆ ತಲುಪುವಂತೆ ಕಳುಹಿಸತಕ್ಕದ್ದು. ಲಕೋಟೆಯ ಮೇಲೆ "ರದ್ದಿ ಕಾಗದಗಳ ಖರೀದಿಗಾಗಿ ಟೆಂಡರು" ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಪ್ರತೀ ಕಿಲೋ ಗ್ರಾಂಗೆ ಅತಿ ಹೆಚ್ಚಿನ ದರವನ್ನು ಕೊಟ್ಟು ಖರೀದಿಸಬಯಸುವವರ ಟೆಂಡರನ್ನು ಮಾನ್ಯ ಮಾಡಲಾಗುವುದು. ಈ ಬಗ್ಗೆ ಸಂಬಂಧಪಟ್ಟವರಿಗೆ ಕಛೇರಿಯಿಂದ ಮಾಹಿತಿ ನೀಡಲಾಗುವುದು. ಅಂಗೀಕೃತ ಟೆಂಡರುದಾರರು ಖರೀದಿಯ ತರುವಾಯ ಸರ್ಕಾರಕ್ಕೆ ಸಂದಾಯವಾಗತಕ್ಕ ಮಾರಾಟ ತೆರಿಗೆಯನ್ನು (G.S.T.) ಕೊಡಲು ಸಿದ್ಧರಿರಬೇಕು.

ಕಛೇರಿಯಲ್ಲಿ ಸ್ವೀಕೃತವಾದ ಟೆಂಡರುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರಿಗೆ ಕಾಯ್ದಿರಿಸಲಾಗಿದೆ.

ಈ ಬಗ್ಗೆ ಹೆಚ್ಚಿನ ವಿವರಗಳು ಬೇಕಾದಲ್ಲಿ, ಈ ನ್ಯಾಯಾಲಯದ ಕಛೇರಿಯಲ್ಲಿ, ಕೆಲಸದ ದಿನಗಳಲ್ಲಿ ಮತ್ತು ಸಮಯದಲ್ಲಿ ಪಡೆಯಬಹುದು.

ಜಿಲ್ಲಾ ನ್ಯಾಯಾಧೀಶರ ಕಛೇರಿ
ಉಡುಪಿ.

16/6

ದಿನಾಂಕ 16-06-2020

ಪ್ರಧಾನ ಜಿಲ್ಲಾ ನ್ಯಾಯಾಧೀಶರು,
ಉಡುಪಿ.
District & Sessions Judge Udupi.

ಪ್ರತಿಗಳನ್ನು ಃ

1. ಕಛೇರಿ ಸೂಚನಾ ಫಲಕಕ್ಕೆ.
2. ನಗರದ ಟೆಂಡರುದಾರರಿಗೆ ಜ್ಯಾರಿ ಬಗ್ಗೆ
3. ತಂತ್ರಾಂಶ ತಂತ್ರಜ್ಞರು - ಪ್ರಕಟಣೆಗಾಗಿ.

Scanned with CamScanner